ಓ.ಎಸ್. ನಂಃ **277/2016**
ಪಿ.ಡಬ್ಲ್ಯೂಃ **1**

ಸಾಕ್ಷಿಗೆ ತೆಲುಗು ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ ಜಿ.ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೋದಿಸಲಾಯಿತು.

ದಿನಾಂಕ 26-10-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **2**(ಎ) ಪ್ರತಿವಾದಿಯ ಪರ: ಶ್ರೀ. ಎ.ಎಸ್.ಪಿ ವಕೀಲರಿಂದಃ

ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಮಾಹಿತಿ ಇದೆ. ಪ್ರಮಾಣ ಪತ್ರ ಕನ್ನಡದಲ್ಲಿ ಇರುವುದರಿಂದ ನನಗೆ ಅದರಲ್ಲಿನ ಅಂಶಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಪಾಲು ವಿಭಾಗಕ್ಕಾಗಿ ದಾಖಲು ಮಾಡಿದ್ದೇನೆ. ನನಗೆ ದಾವಾ ಆಸ್ತಿಯ ಸರ್ವೆ ನಂಬರು ಗೊತ್ತಿಲ್ಲ ಅದರೆ ಒಟ್ಟು 09 ಎಕರೆ ಜಮೀನು ಇದೆ. ಜಮೀನು ಮತ್ತು ಮನೆಗೆ ಸಂಬಂಧಿಸಿದಂತೆ ದಾವೆ ದಾಖಲು ಮಾಡಿದ್ದೇನೆ. ಮನೆಯ ಆಸ್ತಿ ನಂಬರು ನನಗೆ ಗೊತ್ತಿಲ್ಲ. ದಾವಾ ಮನೆಯ ಖಾತಾ ನಕಲನ್ನು ನಾನು ಹಾಜರು ಮಾಡಿಲ್ಲ.

2. ಸರ್ವೆ ನಂ.566 ರ ಜಮೀನು ಕ್ಷೇತ್ರ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.798 ರ ಜಮೀನು ಕ್ಷೇತ್ರ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಆದರೆ ದಾವಾ ಜಮೀನು ಒಟ್ಟು 09 ಎಕರೆ ಇದೆ ಎಂದು ನುಡಿಯುತ್ತಾರೆ. ದಾವಾ ಜಮೀನುಗಳು ಯಾರ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಇತ್ತು ಆ ನಂತರ 2 ನೇ ಪ್ರತಿವಾದಿ ಹಕ್ಕು ಬದಾಲವಣೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಗೆ ದಾವಾ ಜಮೀನು ಹೇಗೆ ಬಂದಿದ್ದವು ಎಂದರೆ ಸಾಕ್ಷಿಯು ನನ್ನ ತಂದೆ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ 2 ನೇ ಪ್ರತಿವಾದಿ ತನ್ನ ಹೆಸರಿಗೆ ಹಕ್ಕು ಬದಲಾವಣೆ

ಮಾಡಿಕೊಂಡಿದ್ದಾರೆ. ನಮ್ಮನ್ನು ಹೆದರಿಸಿ 2 ನೇ ಪ್ರತಿವಾದಿ ಹಕ್ಕು ಬದಲಾವಣೆ ಮಾಡಿಕೊಂಡಿದ್ದಾರೆ.

3. ನನ್ನ ತಂದೆ ಮರಣಹೊಂದಿ ಈಗ 20 ವರ್ಷ ಮೇಲ್ಪಟ್ಟು ಆಗಿದೆ. 2 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಹಕ್ಕು ಬದಲಾವಣೆ ಪ್ರಶ್ನಿಸಿ ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ, ಈ ದಾವೆ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ. ನನಗೆ ಹಾಗೂ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದಿರುವುದರಿಂದ ನಾವು ಸದರಿ ಹಕ್ಕು ಬದಲಾವಣೆಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

4. ತಹಸಿಲ್ದಾರರ ಕಡೆಯಿಂದ ನಮ್ಮ ಕುಟುಂಬದ ವಂಶಾವಳಿ ಪ್ರಮಾಣ ಪತ್ರ ಪಡೆದುಕೊಂಡು ನಂತರ ದಾವೆ ದಾಖಲು ಮಾಡಿದ್ದೇವೆ. ಸದರಿ ವಂಶಾವಳಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ. ಆ ರೀತಿ ಪ್ರಮಾಣ ಪತ್ರ ಪಡೆದುಕೊಂಡಿಲ್ಲ ಹಾಗೂ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾರಾಯಣ ತಂದೆ ಆಶಣ್ಣ ಮುಕಡಿ ಎಂಬಾತ 2 ನೇ ಪ್ರತಿವಾದಿಯ ದೊಡ್ಡಪ್ಪ ಆಗಿರುತ್ತಾರೆ. ಈಗ 32 ವರ್ಷಗಳ ಹಿಂದೆಯೇ ಸಾಬಣ್ಣ ಹಾಗೂ ನಾರಾಯಣ ರವರು ವಿಭಾಗ ಮಾಡಿಕೊಂಡಿದ್ದು ಅದರಲ್ಲಿ ಸರ್ವೆ ನಂ.798 ರ ಜಮೀನು 2 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಹಕ್ಕು ಬದಲಾವಣೆ ನಂ.320 ರಲ್ಲಿ ದಿಃ 16.07.1981 ರಂದು 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಈವರೆಗೆ ಸದರಿ ದಾವಾ ಆಸ್ತಿ 2 ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇದೆ ಎಂದರೆ ಸರಿ. 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿರುವ ಬಗ್ಗೆ ನನಗೆ ನನ್ನ ತಂದೆ ತೀರಿಕೊಂಡ 02 ವರ್ಷಗಳ ನಂತರ ಗೊತ್ತಾಗಿರುತ್ತದೆ. ಆ ನಂತರ ನಾನು ಸದರಿ ಹಕ್ಕು ಬದಲಾವಣೆಯನ್ನು ಉಪ-ವಿಭಾಗಾಧಿಕಾರಿಗಳ ಮುಂದೆ ಪ್ರಶ್ನೆ ಮಾಡಿಲ್ಲ. ನಾನು ಹಾಗೂ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಕುಟುಂಬಕ್ಕೆ ಹಾಗೂ

ದಾವಾ ಆಸ್ತಿಗಳಿಗೆ ಸಂಬಂಧ ಇಲ್ಲದಿರುವುದರಿಂದ ಹಕ್ಕು ಬದಲಾವಣೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

5. ಈಗ 41 ವರ್ಷಗಳ ಹಿಂದೆಯೇ 2 ನೇ ಪ್ರತಿವಾದಿ ಹಾಗೂ ಅಂತಪ್ಪ ಪಾಲು ವಿಭಾಗ ಮಾಡಿಕೊಂಡಿದ್ದು ಅದರ ಪ್ರಕಾರ ದಾವಾ ಸರ್ವೆ ನಂ.566 ರ 08 ಎಕರೆ ಜಮೀನು 2 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಪಾಲು ವಿಭಾಗ ಮಾಡಿಕೊಂಡಿದ್ದರು ಆದರೆ ಸದರಿ ಆಸ್ತಿ 2 ನೇ ಪ್ರತಿವಾದಿಯ ಪಾಲಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗವನ್ನು ಸಹ ನಾವು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನನಗೆ ಮತ್ತು 1 ನೇ ಪ್ರತಿವಾದಿಗೆ ಹಕ್ಕು ಇಲ್ಲದಿರುವುದರಿಂದ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

6. ನಾನು ತೆಲಂಗಾಣ ರಾಜ್ಯದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಕೊಂಕಲ್ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಸದರಿ ಕೊಂಕಲ್ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ಆಧಾರ ಕಾರ್ಡ್ ಹಾಗೂ ರೇಷನ್ ಕಾರ್ಡ್ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

7. ನನ್ನ ತಾಯಿ ಸಾಯಮ್ಮ ಹಾಗೂ ಅಂತಪ್ಪನ ಮದುವೆ ಆಗಿರುವುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ಆ ರೀತಿ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಸಾಯಮ್ಮ ಮತ್ತು ಅಂತಪ್ಪನ ಮದುವೆ ಕೊಂಕಲ್ ಗ್ರಾಮದಲ್ಲಿಯೇ ಆಗಿತ್ತು, ಆದರೆ ಎಷ್ಟು ವರ್ಷಗಳ ಹಿಂದೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಕೊಂಕಲ್ ಗ್ರಾಮದ ಅಂತಪ್ಪನ ಮನೆಯ ಹತ್ತಿರ ಮದುವೆ ಆಗಿತ್ತು. ಅಂತಪ್ಪ ಮತ್ತು ಸಾಯಮ್ಮ ಗಂಡ-ಹೆಂಡತಿ ಇದ್ದರು ಎಂಬುದನ್ನು ತೋರಿಸಲು ಪೋಟೊ ಇದೆಯೇ ಎಂದರೆ ಸಾಕ್ಷಿಯು ಆ ಕಾಲದಲ್ಲಿ ಪೋಟೊ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸಂಬಂಧ ಪಟ್ಟ

ಮತದಾರರ ಚೀಟಿಯನ್ನು ಸಹ ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ತಾಯಿ ಸಾಯಮ್ಮ ಅಂತಪ್ಪನ 2 ನೇ ಹೆಂಡತಿ ಆಗಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅವರುಗಳ ಮದುವೆ ಕೊಂಕಲ್ ಗ್ರಾಮದ ಅಂತಪ್ಪನ ಮನೆಯ ಹತ್ತಿರ ಆಗಿತ್ತು ಎಂದು ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿಯರು 2 ನೇ ಪ್ರತಿವಾದಿಯ ಕುಟುಂಬಕ್ಕೆ ಹಾಗೂ ದಾವಾ ಆಸ್ತಿಗಳಿಗೆ ಯಾವುದೇ ರೀತಿ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿಯರು 2 ನೇ ಪ್ರತಿವಾದಿಯ ಕುಟುಂಬದ ಸದಸ್ಯರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅನಂತಮ್ಮ ಒಬ್ಬರು ಮಾತ್ರ ಅಂತಪ್ಪನ ಹೆಂಡತಿ ಆಗಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮಾತ್ರ ಅನಂತಪ್ಪನ ಮಗ ಆಗಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿ 05 ವರ್ಷದವರು ಆಗಿದ್ದಾಗ ಆತನ ತಾಯಿ ಅನಂತಮ್ಮ ಗಂಡ ಮತ್ತು ಮಗನನ್ನು ಬಿಟ್ಟು ತವರು ಮನೆಗೆ ಹೋಗಿದ್ದರಿಂದ ಅಂತಪ್ಪ ನನ್ನ ತಾಯಿಯನ್ನು 2 ನೇ ಮದುವೆಯಾಗಿದ್ದರು ಎಂದು ನುಡಿಯುತ್ತಾರೆ. ಅನಂತಮ್ಮ ಬಿಟ್ಟು ಹೋಗಿದ್ದರು ಹಾಗೂ ಆ ನಂತರ ಅಂತಪ್ಪ ನನ್ನ ತಾಯಿಯನ್ನು 2 ನೇ ಮದುವೆ ಆಗಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಸುಳ್ಳು ವಂಶವೃಕ್ಷ ನಮುಂದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ